# ‘ಬೆಂಗಳೂರು ದೇಶದ ಸಂಶೋಧನೆಯ ರಾಜಧಾನಿ’

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ನಗರವು ಇಡೀ ದೇಶದ ಸಂಶೋಧನೆಯ ರಾಜಧಾನಿಯಾಗಿದ್ದು, ಉದ್ಯಮಶೀಲತೆಗೆ ತಕ್ಕ ಸ್ಥಳವಾಗಿದೆ.



ದೇಶವು ಡಿಜಿಟಲ್ ರೂಪಾಂತರವನ್ನು ಹೊಂದಬೇಕಾದರೆ ಈ ಉದ್ಯಮಶೀಲ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸಬೇಕಾದದ್ದು ಮುಖ್ಯವಾಗಿದೆ ಎಂದು ಸಿಸ್ಕೊ ಕಂಪನಿಯ ಉನ್ನತಾಧಿಕಾರಿ ವಿ ಸಿ ಗೋಪಾಲರತ್ನಂ ಹೇಳಿದರು.

ನಗರದ ಆರ್ ವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸೋಮವಾರ ನಡೆದ ‘ಸೆಂಟರ್ ಆಫ್ ಎಕ್ಸಲೆನ್ಸ್’ನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು “ನವೋದ್ಯಮಗಳನ್ನು ಸ್ಥಾಪಿಸಲು ಅಗತ್ಯವಾದ ತರಬೇತಿ ಮತ್ತು ಕೌಶಲವನ್ನು ರಾಜ್ಯದ ಉತ್ಸಾಹಿಗಳಿಗೆ ಈ ಕೇಂದ್ರವು ಒದಗಿಸಲಿದೆ. ಈ ಮೂಲಕ ತಂತ್ರಜ್ಞಾನ ಕ್ಷೇತ್ರದಲ್ಲಿ ಮನ್ವಂತರವೇ ಸೃಷ್ಟಿಯಾಗಲಿದೆ” ಎಂದರು.

“ಭಾರತದ ಉದ್ಯಮಶೀಲ ಉತ್ಸಾಹ, ಕೌಶಲಪೂರ್ಣ ಮಾನವ ಸಂಪನ್ಮೂಲದ ಲಭ್ಯತೆ ಮತ್ತು ಉದ್ದಿಮೆಗಳಿಗೆ ಸದಾ ನೆರವು ನೀಡುವ ಇಲ್ಲಿನ ಸರಕಾರಗಳಿಂದಾಗಿ ಇಡೀ ದೇಶವು ಡಿಜಿಟಲ್ ರೂಪವನ್ನು ಸದ್ಯದಲ್ಲೇ ಪಡೆಯಲಿದೆ. ಈ ಕೇಂದ್ರವು ಸಂಶೋಧನೆಗೆ ಹೆಚ್ಚಿನ ಮಹತ್ವ ನೀಡಲಿದ್ದು, ಡಿಜಿಟಲ್ ಭಾರತವನ್ನು ಮುನ್ನಡೆಸುವಂಥ ಉದ್ಯಮಿಗಳನ್ನು ಬೆಳಕಿಗೆ ತರಲಿದೆ” ಎಂಬ ಆಶಾವಾದ ವ್ಯಕ್ತಪಡಿಸಿದರು.

ರಾಜ್ಯ ಐಟಿ-ಬಿಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತ “ಮುಂದಿನ ಐದು ವರ್ಷಗಳಲ್ಲಿ ಈ ಕೇಂದ್ರವು ರಾಜ್ಯದ 50 ಎಂಜಿನಿಯರಿಂಗ್ ಕಾಲೇಜುಗಳ 10 ಸಾವಿರ ವಿದ್ಯಾರ್ಥಿಗಳಿಗೆ ವಿಶೇಷ ಪಠ್ಯಕ್ರಮದ ಮೂಲಕ ಬೋಧಿಸಲಿದೆ. ಇದರಿಂದಾಗಿ ಅವರಿಗೆಲ್ಲ ಡಿಜಿಟಲ್ ಅರ್ಥವ್ಯವಸ್ಥೆಯಲ್ಲಿ ನಿರ್ಣಾಯಕವಾದ ಹುದ್ದೆಗಳು ಸಿಗಲಿವೆ. ಜತೆಗೆ ಈಗಾಗಲೇ ಒಂದೆರಡು ದಶಕಗಳ ವೃತ್ತಿ ಅನುಭವಿಗಳಿಗೂ ಅಗತ್ಯವಾಗಿರುವ ತರಬೇತಿಗಳನ್ನು ಒದಗಿಸಲಾಗುವುದು” ಎಂದರು. ಪ್ರಾಂಶುಪಾಲ ಡಾ. ಕೆ ಎನ್ ಸುಬ್ರಹ್ಮಣ್ಯ ಮುಂತಾದವರು ಉಪಸ್ಥಿತರಿದ್ದರು.